ಶ್ರೀ ಪಂಚಾಪತಿ.—ದಿನಗೂಲಿಯ ಮೇಲೆ ಐದಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡುತ್ತೇವೆಂದೂ, ಹಾಗೂ ಕನಿಷ್ಟ ಕೂಲಿಯನ್ನು ನಿಗದಿ ಮಾಡಿದ್ದೇವೆಂದು ಹೇಳಿದ್ದಾರೆ. ಕನಿಷ್ಟ ಕೂಲಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಎಂಬುದನ್ನು ಮಂತ್ರಿಗಳು ತಿಳಿಸಬೇಕು ?.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆವಶ್ಯಕತೆಗನುಗುಣವಾಗಿ ದಿನಗೂಲಿಯ ಮೇಲೆ ತೆಗೆದುಕೊಂಡರೆ, ಕೆಲಸ ಇಲ್ಲದೆ ಇದ್ದಾಗ ಅವರುಗಳನ್ನು ಕೆಲಸದಿಂದ ತೆಗೆದುಹಾಕುತ್ತೇವೆ. ಇವರುಗಳನ್ನು ಆದಷ್ಟು ಬೇಗ ಖಾಯಂ ಮಾಡಬೇಕೆಂದು, ಇವರಿಗೊಂದು ಶಾಶ್ವತವಾದ ನೆಲೆಯನ್ನು ಮಾಡಿಕೊಡಬೇಕೆನ್ನುವ ದೃಷ್ಟಿಯನ್ನಿಟ್ಟುಕೊಂಡು ನಾವು ಒಂದು ಸಮಿತಿಯನ್ನು ಮಾಡಿದ್ದೇವೆ. ಇವರುಗಳಿಗೆ ಸರಿಯಾದ ವೇತನ ಫಿಕ್ಸ್ ಮಾಡುವುದು, ರೆಗ್ಯೂಲರೈಸ್ ಮಾಡುವುದಕ್ಕೆ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ ನಂತರ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಪಂಪಾಪತಿ.—ಕನಿಷ್ಟ ಕೂಲಿ ದರವನ್ನು ನಿಗದಿ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಅದನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕನಿಷ್ಟ ಕೂಲಿಯನ್ನು ನಿಗದಿ ಮಾಡಿಲ್ಲ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಖಾಸಗೀ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಯಾವ ರೀತಿ ನೋಡಿಕೊಳ್ಳಬೇಕೆಂಬ ಬಗ್ಗೆ ಒಂದು ಕಾನೂನನ್ನು ಮಾಡಲಾಗಿದೆ. ಆ ನಿಯಮವನ್ನು ಸರ್ಕಾರ ಪರಿಪಾಲನೆ ಮಾಡುತ್ತಿದೆಯೆ ಎನ್ನುವುದು ನನ್ನ ಪ್ರಶ್ನೆ ಏಕೆಂದರೆ ಸರ್ಕಾರವೇ ಕಾನೂನನ್ನು ಪರಿಪಾಲನೆ ಮಾಡಲಿಲ್ಲ ಅಂದರೆ ಖಾಸಗೀ ಉದ್ದಿಮೆದಾರರು ನಗುತ್ತಾರೆ. ದಯವಾಡಿ ಈ ನಿಯಮವನ್ನು ಸರ್ಕಾರವು ಕೂಡ ಪರಿಪಾಲನೆ ಮಾಡುತ್ತದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ವಿಷಯವನ್ನು ಪರಿಶೀಲನೆ ಮಾಡುತ್ತೇನೆ.

MR. DEPUTY SPEAKER.—Next question. Hon'ble Member Sri G.L. Asthekar to put question No.170 (591).

SRI P.A. PAWASHE.—Sir, hon. Member is not present. Since this pertains to Belgaum City in respect of opening of Veterinary College which is very important one I may be permitted to put this questi on on behalf of G.S. Asthekar.

MR. DEPUTY SPEAKER.—I have not received any authorisation from him. You cannot put the question.

Lift Irrigation Scheme near Hunduwadi and Yachegowdanahalli.

718. SRI D. JAYADEVARAJ URS. (Chamundeshwari).—Will the Minister for Transport and Minor Irrigation be pleased to state.—

(a) whether Lift Irrigation Scheme near Handuwadi and Yachegowdanahalli (Ilawala Hobli) of Mysore Taluk has been estimated;

(b) if so; what is the estimated cost?

SRI M.M.J. SADYOJATHA (Minister for Transport and Minor Irrigation)—

(a) (i) Hunduvadi Lift Irrigation Scheme has been examined and dropped.

(ii) Lift Irrigation Scheme near Yachegowdanahalli has been estimated.

(b) (i) This question does not arise in view of of reply furnished above (regarding Handuvadi Lift Irrigation scheme).

(ii) Rs. 6.85 lakhs.

ಶ್ರೀ ಡಿ. ಜಯದೇವರಾಜಅರಸ್.—ಸ್ವಾಮಿ ತಾವು ಈ ಒಂದು ಯೋಜನೆಯನ್ನು ಕೈಬಿಟ್ಟಿದ್ದೀ ವೆಂದು ಹೇಳಿದ್ದೀರಿ. ಮತ್ತೊಂದು ಯೋಜನೆಗೆ ಅಂದಾಜು ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಅಂದಾಜು ಮಾಡಿರತಕ್ಕಂಥ ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ.ಎಂ ಜೆ. ಸದ್ಯೋಜಾತ.—ಹಣಕಾಸಿನ ಮುಗ್ಗಟ್ಟಿನಿಂದ ಈ ಯೋಜನೆಯನ್ನು ಸೇರಿಸಿಲ್ಲ ಹಣಕಾಸಿನ ಸ್ಥಿತಿ ಉತ್ತಮಗೊಂಡಾಗ ಈ ಯೋಜನೆಯ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಡಿ. ಜಯದೇವರಾಜಅರಸ್.—ಈ ಯೋಜನೆಯನ್ನು ಕಾರ್ಯಗತ ಮಾಡಲು ಹಣಕಾಸಿಗೆ ಕಷ್ಟ ಎಂದು ಹೇಳುತ್ತಿದ್ದೀರಿ. ಮತ್ತು ಈ ಯೋಜನೆಗೆ ೬.೮೫ ಲಕ್ಷ ಅಂದಾಜು ಮಾಡಲಾಗಿದೆ ಎಂದು ಹೇಳಿರುತ್ತೀರಿ, ಆದರೆ ಇದು ಇನ್ನು ಒಂದೆರಡು ವರ್ಷಗಳ ಕಾಲವಾದರೆ ೧೦ ಲಕ್ಷ ರೂಪಾಯಿ ಗಳು ಆಗಬಹುದು. ಇದು ಹತ್ತು ವರ್ಷಗಳ ಹಿಂದೆಯೇ ಇನ್‌ವೆಸ್ಟಿಗೇಷನ್ ಆಗಿದ್ದು ಎರಡು ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿತ್ತು. ಇದೆ ಯೋಜನೆಗೆ ಇವತ್ತು ೬.೮೫ ಲಕ್ಷ ರೂಪಾಯಿಂಗಳ ಅಂದಾಜು ಮಾಡಲಾಗಿದೆ. ಹಣಕಾಸಿನ ಮಂತ್ರಿಗಳು ದಯವಿಟ್ಟು ಈಗಲಾದರೂ ಈ ಯೋಜನೆಯನ್ನು ತೆಗೆದುಕೊಂಡರೆ ಸುಮಾರು ೧೫–೨೦ ಲಕ್ಷ ರೂಪಾಯಿಗಳಲ್ಲಿ ಮುಗಿಸಬಹುದು. ಆದ್ದರಿಂದ ದಯವಿಟ್ಟು ಸರ್ಕಾರದವರು ಆಲೋಚನೆ ಮಾಡಿ ಈ ಯೋಜನೆಯನ್ನು ತೆಗೆದುಕೊಂಡು ಮುಗಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಹಣಕಾಸಿನ ಮಂತ್ರಿಗಳು ಹಣವನ್ನು ಕೊಟ್ಟರೆ ನಾಳೆಯ ದಿವಸವೇ ಈ ಯೋಜನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಜಯದೇವರಾಜಅರಸ್.—ಮಾನ್ಯ ಅಧ್ಯಕ್ಷರೇ ಈ ಪ್ರದೇಶ ಕೇವಲ ೧೦–೧೨ ಇಂಚಿಂ ಮಳೆ ಬೀಳತಕ್ಕಂಥ ಪ್ರದೇಶವಾಗಿರುತ್ತದೆ. ಆದ್ದರಿಂದ ಸಣ್ಣ ನೀರಾವರಿ ಮಾಡತಕ್ಕಂಥ ರೈತರು ಬಹಳ ಕಂಗೆಟ್ಟಿದ್ದಾರೆ. ಈ ಯೋಜನೆಯನ್ನು ತೆಗೆದುಕೊಂಡು ಪೂರೈಸಿದ್ದೇ ಆದರೆ ಅವರಿಗೆ ಸ್ವಲ್ಪ ಅನುಕೂಲ ಮಾಡಿದಂತಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ೧೯೮೨–೮೩ನೇ ಸಾಲಿಗಾದರೂ ಸೇರಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—೧೯೮೨–೮೩ಕ್ಕೆ ಆಗುವುದಿಲ್ಲ. ೧೯೮೪–೮೫ಕ್ಕೆ ಸೇರಿಸಲು ಪರಿಶೀಲನೆ ಮಾಡುತ್ತೇನೆ.

SHORT NOTICE QUESTION

Co-operative Loans due from the Small and Marginal Farmers in the State.

13. Sri J.H. Patil (Channagiri).—Will the Minister for Co-operation be pleased to state.—

(a) whether the Government has constituted Committees for considering the waiver of Co-operative loans due from the small and marginal farmers in the state;

(b) if so, the number of applications received and out of them number of applications recommended by the Committee;

(c) the number of cases wherein the loans have been waived (Districtwise figures may please be given)?